**ಸಾಕ್ಷಿಯನ್ನು ದಿನಾಂಕಃ 28.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ವೈ, ವಕೀಲರಿಂದಃ**

ದೇವನಹಳ್ಳಿ ಗ್ರಾಮದ ಸರ್ವೆ ನಂ.70/2ರ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ಜಮೀನಿನ ಮೂಲ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.70/2ರ ಮೂಲ ಮಾಲೀಕರು ಸ್ವಲ್ಪ-ಸ್ವಲ್ಪ ಜಮೀನನ್ನು ಬೇರೆಯವರಿಗೆ ಕೊಟ್ಟಿರುತ್ತಾರೆಂದರೆ ಇರಬಹುದು. ಸರೋಜಮ್ಮ ಎಂಬುವವರಿಂದ ಆಸ್ತಿಯನ್ನು ಖರೀದಿಸಿರುತ್ತೇವೆ. ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ದಾಖಲೆಗಳನ್ನು ನೋಡಿರುತ್ತೇವೆ. ಸರೋಜಮ್ಮರವರು ಯಾರಿಂದ ಕ್ರಯಕ್ಕೆ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನಂಜಯ್ಯ ಎಂಬುವವರು ಪುಟ್ಟಹೆತ್ತಯ್ಯರವರಿಗೂ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟಹೆತ್ತಯ್ಯರವರು ಸರೋಜಮ್ಮರವರಿಗೆ ಮಾರಾಟ ಮಾಡಿದ ಬಗ್ಗೆ ದಾಖಲೆ ನೋಡಿಲ್ಲ. ಸರೋಜಮ್ಮರವರಿಗೆ ಯಾವ ಇಸವಿಯಲ್ಲಿ ಕ್ರಯವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ನಮಗೆ ಮಾರಾಟ ಮಾಡಿದವರು ಯಾವಾಗ ಕ್ರಯಕ್ಕೆ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೂ ಮತ್ತು ಸರೋಜಮ್ಮರವರು ಖರೀದಿಸಿರುವ ಸ್ವತ್ತಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿ. ಸರೋಜಮ್ಮ ಮತ್ತು ಪುಟ್ಟಹೆತ್ತಯ್ಯರವರಿಗೆ ಸಂಬಂಧಪಟ್ಟ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಎಂ ಪುಟ್ಟಸ್ವಾಮಿ ಎಂಬುವವರು ವಾದಿಯ ಪೂರ್ವ ಮಾಲೀಕರಾಗಿರುತ್ತಾರೆ. ಈ ಹಿಂದೆ ವಾದಿಯಾದ ಬಿ ಸ್ವಾಮಿಯವರು ಮೂಲ ದಾವೆ ಸಂಖ್ಯೆ 101/2007 ರಂತೆ ಪ್ರತಿವಾದಿಯ ವಿರುದ್ಧ ದಾವೆ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಬಿ ಸ್ವಾಮಿಯವರು ಪಾಟೀಸವಾಲಿಗೆ ಒಳಪಟ್ಟಿರುತ್ತಾರೆ

ಎಂದರೆ ನನಗೆ ಗೊತ್ತಿಲ್ಲ. ನಿಪಿ-37 ದಾವಾ ಸ್ವತ್ತಿನ ಮುಂಭಾಗದ ಆಸ್ತಿಗೆ ಸಂಬಂಧಿಸಿದ ದಾಖಲೆಯಾಗಿರುತ್ತದೆ. ದಾವಾ ಸ್ವತ್ತಿನ ಮುಂಭಾಗದಲ್ಲಿ ನಾನು ಹೇಳುವಂತಹ ನಿಪಿ-37 ರಲ್ಲಿ ನಮೂದಿಸಿರುವ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಬಡಾವಣೆ ನಕ್ಷೆ ಹಾಜರುಪಡಿಸಿರುತ್ತೀರಾ ಎಂದರೆ ಒಂದು ನಕ್ಷೆಯನ್ನು ಹಾಜರುಪಡಿಸಿರುತ್ತೇನೆ, ಅದು ಅನುಮೋದಿತ ನಕ್ಷೆಯಾಗಿರುತ್ತದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ನಾನು ಬಿ.ಕಾಂ.,ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-39 ನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದವರು ಮೊಹರು ಹಾಕಿ ಅನುಮೋದನೆ ನೀಡಿಲ್ಲ ಎಂದರೆ ಮೊಹರು ಹಾಕಿ ಅನುಮೋದಿಸಿರುವುದಿಲ್ಲ. ನಿಪಿ-39 ರಲ್ಲಿ ಯಾವ ದಿನಾಂಕಕ್ಕೆ ಸಂಬಂಧಪಟ್ಟಿದ್ದು ಎಂದು ನಮೂದಿಲ್ಲ ಎಂದರೆ ಸರಿ. ನಿಪಿ-39 ವಾದಿಯ ದಾಖಲಾತಿಗಳ ಜೊತೆ ಇತ್ತು. ನಿಪಿ-39 ನ್ನು ಈ ಮೇಲೆ ಹೇಳಿದಂತೆ ಹಿಂದಿನ ದಾವೆಯಲ್ಲಿ ಹಾಜರುಪಡಿಸಿರುತ್ತಾರೋ, ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ-39 ವಾದಿಯ ಬಳಿ ಇರಲಿಲ್ಲ, ಬದಲಾಗಿ ಅದನ್ನು ಈ ದಾವೆಗಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-16 ನ್ನು ಈ ಹಿಂದೆಯೇ ವಾದಿ ಹಿಂದಿನ ದಾವೆಯಲ್ಲಿ ಹಾಜರುಪಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-16 ನ್ನು ವಾದಿಗೆ ಮಾರಾಟ ಮಾಡಿದ ಮಾಲೀಕರು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-16 ಅಧಿಕೃತ ಜ್ಞಾಪನ ಹೊರಡಿಸುವ ಪೂರ್ವದಲ್ಲಿಯೇ ಪ್ರತಿವಾದಿಯ ತಂದೆ ಮತ್ತು ಪಕ್ಕದ ಜಮೀನಿನ ಮಾಲೀಕರಾದ ನಾಗಮಹದೇವಪ್ಪರವರು ಸೇರಿ 1974-75 ರ ಅವಧಿಯಲ್ಲಿಯೇ ತಲಾ 10 ಗುಂಟೆ ಜಮೀನನ್ನು ಅನ್ಯಕ್ರಾಂತ ಮಾಡಿಸಿದ್ದರು ಎಂದರೆ ಸದರಿ ಜಮೀನುಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟ ಆಸ್ತಿಗಳಾಗಿರುವುದಿಲ್ಲ. ಅಸ್ತಿತ್ವದಲ್ಲಿಲ್ಲದೇ ಇರುವ ಜಮೀನಿಗೆ ನಿಪಿ-16 ರಂತೆ ಅನ್ಯಕ್ರಾಂತ ಆದೇಶ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ನಿಪಿ-34 ರಲ್ಲಿ ನಮೂದಿಸಿರುವ ಶಿವಕುಮಾರ್ ರವರು ಈ ಹಿಂದಿನ ದಾವೆಯಲ್ಲಿ ವಿಚಾರಣೆಗೊಳಪಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-34 ಅಸ್ತಿತ್ವದಲ್ಲಿಲ್ಲದಿರುವ ಆಸ್ತಿಗೆ ಮಾಡಿಕೊಂಡಿರುವ ಕ್ರಯಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-34 ರಲ್ಲಿ ನಮೂದಿಸಿರುವ ತಪಶೀಲು ಸ್ವತ್ತು ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ-35 ಕೂಡ ಅಸ್ತಿತ್ವದಲ್ಲಿಲ್ಲದೇ ಇರುವ ಆಸ್ತಿಗೆ ಕ್ರಯವಾಗಿರುತ್ತದೆ ಎಂದರೆ ಸರಿಯಲ್ಲ. ಈ ಹಿಂದಿನ ದಾವೆಯಲ್ಲಿಯೂ ಕೂಡ ನಿಪಿ-35 ರಲ್ಲಿ ನಮೂದಿಸಿರುವ ಸುಧಾಮಣಿಯವರು ವಿಚಾರಣೆಗೊಳಪಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಶಿವಕುಮಾರ್ ಮತ್ತು ಸುಧಾರಾಣಿ ಯಾರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸುಧಾರಾಣಿಯವರಿಗೆ ಮಾರಾಟ ಮಾಡಿರುತ್ತಾರೆಂದು ಹೇಳಿರುವ ಮಹದೇವಪ್ಪರವರು ಈ ಹಿಂದಿನ ದಾವೆಯಲ್ಲಿ ವಿಚಾರಣೆಗೊಳಪಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಹದೇವಪ್ಪ ಶಿವಕುಮಾರ್ ಮತ್ತು ಸುಧಾರಾಣಿಯವರು ಅಸ್ತಿತ್ವದಲಿಲ್ಲದೇ ಇರುವ ಸ್ವತ್ತಿಗೆ ಕ್ರಯಪತ್ರಗಳನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**
**ನಂಜನಗೂಡು.**